(ಇಂದು ದಿನಾಂಕಃ 14-01-2026 ರಂದು ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

(ಸಾಕ್ಷಿದಾರರು ಕೊಂಕಣಿ ಭಾಷೆ ಮಾತನಾಡುವವರಾಗಿದ್ದರಿಂದ ವಕೀಲರಾಗಿರುವ ಮಿಸ್. ಎನ್.ಡಿ.ಕೆ. ವಕೀಲರನ್ನು ಕನ್ನಡ ಭಾಷೆಗೆ ಭಾಷಾಂತರ ಮಾಡಲು ನೇಮಿಸಿಕೊಳ್ಳಲಾಯಿತು.)

**ಪಾಟೀ ಸವಾಲುಃ 3, 4, 6 ಮತ್ತು 7 ನೇಪ್ರತಿವಾದಿಯರ ಪರಃ ಶ್ರೀಮತಿ ಎಸ್.ಜಿ.ಎನ್. ವಕೀಲರಿಂದಃ**

ನಮ್ಮ ತಂದೆಗೆ 3 ಗಂಡು ಮಕ್ಕಳು. ಒಬ್ಬಳು ಹೆಣ್ಣು ಮಗಳು. ನಮ್ಮ ತಂದೆ ಅಕ್ಕಸಾಲಿಗ ಕೆಲಸ ಮಾಡುತ್ತಿದ್ದರು. ನಮ್ಮ ತಂದೆ ತಮ್ಮ ಆದಾಯದಿಂದ ಬಂದ ಹಣದಲ್ಲಿ ದಾವಾ ಸ್ವತ್ತನ್ನು ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದರೆ ಸರಿ. ಪ್ರತಿವಾದಿ ನಂ.1 ನನ್ನ ತಾಯಿ ಎಂದರೆ ಸರಿ. ನಮ್ಮ ತಾಯಿ ಗೃಹಿಣಿಯಾಗಿದ್ದು ಯಾವುದೇ ಕೆಲಸ ಮಾಡುವುದಿಲ್ಲ ಎಂದರೆ ಸರಿ.2 ನೇ ಪ್ರತಿವಾದಿಯ ಮದುವೆಯನ್ನು ನಮ್ಮ ತಂದೆ-ತಾಯಿ ಮತ್ತು ನಾವು 3 ಜನ ಗಂಡು ಮಕ್ಕಳು ಸೇರಿ ಮಾಡಿದ್ದೇವೆ. 2 ನೇ ಪ್ರತಿವಾದಿಯ ಮದುವೆಯ ಕಾಲಕ್ಕೆ 21 ತೊಲೆ ಬಂಗಾರವನ್ನು ಕೊಟ್ಟು ಮದುವೆ ಮಾಡಿದ್ದೇವೆ. ಎಷ್ಟು ಖರ್ಚಾಗಿದೆ ಎಂದು ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿ ಮತ್ತು ಅವರ ಕುಟುಂಬದವರು ದಾವಾ ಸ್ವತ್ತಿನಲ್ಲಿ ವಾಸವಾಗಿದ್ದಾರೆ ಎಂದರೆ ಸಾಕ್ಷಿ ಮದುವೆಯಾದ ನಂತರದಿಂದ ವಾಸವಾಗಿದ್ದಾರೆ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಯನ್ನು ಪ್ರತಿವಾದಿ ನಂ.3 ಮತ್ತು ಅವರ ಕುಟುಂಬದವರು ನೋಡಿಕೊಳ್ಳುತ್ತಾರೆ ಎಂದರೆ ಸರಿ, ಸಾಕ್ಷಿ ಮುಂದುವರಿದು ನಾನೂ ಹಣವನ್ನು ಕಳುಹಿಸುತ್ತೇನೆ ಎಂದು ಹೇಳುತ್ತಾರೆ. 3 ನೇ ಪ್ರತಿವಾದಿ ಮತ್ತು ಅವಳ ಗಂಡ ಮನೆಯ ಎಲ್ಲಾ ಪೂಜಾ -ಕಾರ್ಯಗಳನ್ನು ಅವರೇ ಮಾಡಿಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ನಾವೆಲ್ಲ ಸೇರಿ ಮಾಡುತ್ತೇವೆ. 1 ನೇ ಪ್ರತಿವಾದಿಗೆ ಆರೋಗ್ಯ ಸರಿ ಇಲ್ಲದಿದ್ದಾಗ 3 ನೇ ಪ್ರತಿವಾದಿ ಮತ್ತು ಅವಳ ಗಂಡ ಆಸ್ಪತ್ರೆಯ ಖರ್ಚನ್ನು ನೋಡಿಕೊಂಡಿದ್ದಾರೆ ಎಂದರೆ ಸಾಕ್ಷಿ ನಾವೂ ಸಹ ಹಣ ಕಳುಹಿಸಿದ್ದೇವೆ ಎಂದು ಹೇಳುತ್ತಾರೆ. ದಿನಾಂಕ 29-09-2011 ರಂದು 1 ನೇ ಪ್ರತಿವಾದಿ ಮೃತ್ಯು ಪತ್ರ ಬರೆದಿದ್ದಾರೆ ಎಂದರೆ ಸರಿ. ಅದರಲ್ಲಿ

ಎಲ್ಲರಿಗೂ ಸಮಭಾಗ ಕೊಡಬೇಕು ಎಂದು ಬರೆದಿದ್ದರು ಎಂದರೆ ಸರಿ. ದಿನಾಂಕ 18-10-2019 ರಂದು ಇನ್ನೊಂದು ಮೃತ್ಯುಪತ್ರ ಬರೆದ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ನಂತರ ಗೊತ್ತಾಯಿತು ಎಂದು ಹೇಳುತ್ತಾರೆ. ಆ ಸಮಯದಲ್ಲಿ 3 ನೇ ಪ್ರತಿವಾದಿಯ ಗಂಡ ಕ್ಯಾನ್ಸರ್ ಆಗಿದ್ದರಿಂದ ಗೋವಾದಲ್ಲಿ ಇದ್ದರು. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ವಿದ್ಯುಚ್ಛಕ್ತಿ ಬಿಲ್, ಮನೆಯ ಕರ, ನೀರಿನ ಕರವನ್ನು ನಾವೆಲ್ಲರೂ ಸೇರಿ ತುಂಬುತ್ತಿದ್ದೇವೆ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಕಾರವಾರ